**ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಹಗರಿಬೊಮ್ಮನಹಳ್ಳಿ**

ಸಿ ಸಿ ನಂ. 1415/2024

ಸಾಕ್ಷಿಗೆ ದಿನಾಂಕ 07-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 5 P.W.: 5

| | | |
|---|---|---|
| ಹೆಸರು | : | ಜಯರಾಮನಾಯ್ಕ |
| ತಂದೆಯ ಹೆಸರು | : | ಫಕ್ರುನಾಯ್ಕ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ, ಅಬಕಾರಿ ನಿರೀಕ್ಷಕರ ಕಚೇರಿ, ಕೂಡ್ಲಿಗಿ ವಲಯ |
| ವಾಸ ಸ್ಥಳ | : | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 02-06-2023 ರಿಂದ 08-02-2024 ರವರೆಗೆ ನಾನು ಹೆಚ್ ಬಿ ಹಳ್ಳಿ ವಲಯ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20-09-2023 ರಂದು ಗಣೇಶ ಹಬ್ಬದ ಪ್ರಯುಕ್ತ ಮದ್ಯ ಮಾರಾಟ ನಿಷೇದಾಜ್ಞೆ ಜಾರಿಯಲ್ಲಿದ್ದುರಿಂದ ನಾನು, ಚಾಸಾ-1, 4, ವಾಹನ ಚಾಲಕ ಬಸವರಾಜ್ ಇವರೊಂದಿಗೆ ಹೆಚ್ ಬಿ ಹಳ್ಳಿ ಪಟ್ಟಣದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿರುವಾಗ ಸಂಜೆ 6.45 ಗಂಟೆ ಸಮಯದಲ್ಲಿ ಆರೋಪಿತನು ಹೆಚ್ ಬಿ ಹಳ್ಳಿ ಪಟ್ಟಣದ ವಾಲ್ಮೀಕಿ ಸರ್ಕಲ್‌ನಲ್ಲಿ ತನ್ನ ಸಾವಜಿ ಮಾಂಸಹಾರಿ ಹೋಟೆಲಿನಲ್ಲಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾನಂತಾ ಮಾಹಿತಿ ಬಂದಿರುತ್ತದೆ. ನಂತರ ರಾಮನಗರ ಸರ್ಕಲ್ಲಿನಲ್ಲಿ ಇಬ್ಬರು ಪಂಚರನ್ನು ಚಾಸಾ-4 ರವರು ಕರೆದು ಚಾಸಾ-1 ರವರ ಮುಂದೆ ಹಾಜರುಪಡಿಸಿರುತ್ತಾರೆ. ಬಾತ್ಮಿಯ ವಿಚಾರವನ್ನು ಚಾಸಾ-1 ರವರು ಪಂಚರಾದ ಚಾಸಾ-2 ಮತ್ತು 3 ರವರಿಗೆ ತಿಳಿಸಿ ದಾಳಿಯಲ್ಲಿ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದು ಅವರು ಒಪ್ಪಿದ ಮೇರೆಗೆ ನಮ್ಮ ಇಲಾಖಾ ವಾಹನ ನಂ. ಕೆಎ-01, ಜಿ-5772 ನೇದ್ದರಲ್ಲಿ ನಾವೆಲ್ಲರೂ ಸೇರಿ ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ಅಲ್ಲಿ ಹೋಟೆಲ್ ಒಳಗಡೆಯಿಂದ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿಹೋಗಿರುತ್ತಾನೆ ಅವನನ್ನು ಹಿಡಿಯಲು ಪ್ರಯತ್ನಿಸಿದರೂ ಅವನು ಸಿಕ್ಕಿಲ್ಲ. ಅಲ್ಲಿದ್ದ ಜನರನ್ನು ಓಡಿಹೋದ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಸುನಿಲ್ ಬಿನ್ ಶಂಕರ್ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿ ಚಾಸಾ-1 ರವರು ಸರ್ಚ ವಾರೆಂಟನ್ನು ತಯಾರಿಸಿಕೊಂಡು ಹೋಟೇಲ್ ಒಳಗಡೆ ಹೋಗಿ ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಹೋಟೆಲ್ಲಿನ ಒಂದು ಕೋಣೆಯಲ್ಲಿ ಎರಡು ರಟ್ಟಿನ

ಪೆಟ್ಟಿಗೆಗಳಲ್ಲಿ ವಿವಿಧ ಬಗೆಯ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ಟುಗಳು ಮತ್ತು ಬಿಯರ್ ಬಾಟಲಿಗಳಿದ್ದವು. ಅದನ್ನು ಎಣಿಸಿ ನೋಡಲಾಗಿ ಅವು ಬಿ ಪಿ ವಿಸ್ಕಿಯ 180 ಮಿಲಿಯ 17 ಟೆಟ್ರಾ ಪ್ಯಾಕೆಟ್ಟುಗಳು, 8 ಪಿ ಎಂದ ವಿಸ್ಕಿಯ 2 ಟೆಟ್ರಾ ಪ್ಯಾಕೆಟ್ಟುಗಳು, ಓ ಎಂ ಆರ್ ಎಕ್ಸ ಎಕ್ಸ ಎಕ್ಸ ರಂ 180 ಮಿಲಿಯ 3 ಟೆಟ್ರಾ ಪ್ಯಾಕೆಟ್ಟುಗಳು, ಮ್ಯಾಕ್ ಡೊವೆಲ್ ನಂ.1 ನ 1 ಟೆಟ್ರಾ ಪ್ಯಾಕೆಟ್ಟು, 650 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ 5 ಬಿಯರ್ ಬಾಟಲಿಗಳು, ಕಿಂಗ್ ಫಿಶರ್ ಪ್ರಿಮಿಯಂ 650 ಮಿಲಿಯ 2 ಬಿಯರ್ ಬಾಟಲಿಗಳು ಇದ್ದವು ಅವುಗಳು ಒಟ್ಟಾರೆಯಾಗಿ 4.14 ಲೀ ಮದ್ಯ ಹಾಗೂ 4.55 ಲೀ ಬಿಯರ್ ಇರುವುದು ಕಂಡುಬಂದಿರುತ್ತದೆ. ಅವುಗಳನ್ನುಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಸಂಜೆ 7.30 ರಿಂದ 8.35 ರವರೆಗೆ ಬರೆಯಲಾಯಿತು. ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಅದನ್ನು ನೋಡಿ ಗುರುತಿಸುತ್ತೇನೆ ಸಾಕ್ಷಿಯು ನಿಪಿ-1 ರ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1ಡಿ ಎಂದು ಗುರುತಿಸಲಾಯಿತು. ಬಿ ಪಿ ವಿಸ್ಕಿಯ 7 ಟೆಟ್ರಾ ಪ್ಯಾಕೆಟ್ಟುಗಳು ಮತ್ತು ಉಳಿದ ಎಲ್ಲಾ ಮದ್ಯವನ್ನು ಎಫ್ ಎಸ್ ಎಲ್ ಗೆ ತೆಗೆದುಕೊಳ್ಳಲಾಯಿತು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ. ಪಂಚನಾಮೆ ಮತ್ತು ಅಮಾನತ್ತುಪಡಿಸಿಕೊಂಡ ಮದ್ಯದ ಸಮೇತ ಸುಮಾರು 8.50 ಗಂಟೆ ಸುಮಾರಿಗೆ ಕಚೇರಿಗೆ ಹಾಜರಾಗಿರುತ್ತೇವೆ. ಚಾಸಾ-1 ರವರು ಸರ್ಕಾರದ ತರ್ಫೆ ದೂರನ್ನು ನೀಡಿರುತ್ತಾರೆ. ಆ ದಿನ ಓಡಿಹೋದ ಆರೋಪಿ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು. ಆರೋಪಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-</u>

ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಚಾಸಾ-1 ರವರಿಗೆ ಮಾಹಿತಿ ಬಂದಾಗ ನಾವು ರಾಮನಗರ ರೈಲ್ವೆ ಗೇಟ್ ಬಳಿ ಇದ್ದೆವು. ಮಾಹಿತಿ ಬಂದಾಗ ಸಂಜೆ 6.45 ಗಂಟೆಯಾಗಿತ್ತು. ನಾವು ಇದ್ದ ಸ್ಥಳದಿಂದ ಘಟನಾ ಸ್ಥಳ ಸುಮಾರು ಅರ್ಧ ಕಿ ಮೀ ಅಂತರದಲ್ಲಿದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಸಮಯ ಸಂಜೆ 7 ಗಂಟೆಯಾಗಿತ್ತು. ರಾಮನಗರ ಬಸ್ ನಿಲ್ದಾಣದಿಂದ ಘಟನಾ ಸ್ಥಳಕ್ಕೆ ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ. ಸದರಿ ಅರ್ಧ ಕಿ ಮೀ ಅಂತರವನ್ನು ನಾನು ಸುಮಾರು ಆರ್ಧ ಗಂಟೆಯಲ್ಲಿ ಪ್ರಯಣಿಸಿರುತ್ತೇವೆ. ಪಂಚನಾಮೆದಾರರ ಹೆಸರು ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಬರೆಯಲು ಪಂಚರು ಹೇಳಿರುತ್ತಾರೆ ಅದನ್ನು ಚಾಸಾ-1 ರವರು ಬರೆದಿರುತ್ತಾರೆ. ನ್ಯಾಯಾಲಯದ ಮುಂದಿರುವಂತಹ ಮು ಮಾಲುಗಳು ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆಂದರೆ ಸರಿಯಲ್ಲ. ಮು

ಮಾಲುಗಳ ಮೇಲಿರುವಂತಹ ಉತ್ಪಾದನಾ ದಿನಾಂಕ, ಬ್ಯಾಚ್ ನಂಬರ್, ಕ್ರಮ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಆ ದಿನ ಮಾಹಿತಿ ಬಂದ ನಂತರದಿಂದ ಸಂಪೂರ್ಣ ದಾಳಿ ಪ್ರಕ್ರಿಯೆ ಮುಗಿಸಿ ದಾಳಿ ಮುಗಿಯುವವರೆಗೆ ರಾತ್ರಿ ೨ ಗಂಟೆ ಸಮಯವಾಗಿತ್ತು. ನಾವು ಆ ದಿನ ಯಾವುದೇ ದಾಳಿ ಮಾಡಿಲ್ಲ, ಯಾದೇ ಪಂಚನಾಮೆ ಜರುಗಿಸಿಲ್ಲ, ಯಾವುದೇ ಮು ಮಾಲುಗಳನ್ನು ವಶಪಡಿಸಿಕೊಂಡಿಲ್ಲ, ಆರೋಪಿಗೂ ಮು ಮಾಲಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲವೆಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆ ಸಲುವಾಗಿ ಚಾಸಾ-1 ರವರು ಒಂದು ಸುಳ್ಳು ದೂರನ್ನು ದಾಖಲಿಸಿಕೊಂಡಿದ್ದು ಅವರು ನಮ್ಮ ಮೇಲಾಧಿಕಾರಿಯಾಗಿರುವುದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ